# ಸ್ವಾತಂತ್ರ್ಯದ ಅಂತರ್ಜಲ

ಭಾರತದ ಸ್ವಾತಂತ್ರ್ಯ ಚಳವಳಿಯ ಸಾಗರಕ್ಕೆ ಕರ್ನಾಟಕದ ತೊರೆಗಳ ಕಾಣಿಕೆಯೂ ಇದೆ. ನಾಡಿನ ವಿವಿಧ ಭಾಗಗಳಲ್ಲಿ ನಡೆದ ಹೋರಾಟದ ನೆನಪುಗಳು ಸ್ಮಾರಕಗಳ ರೂಪದಲ್ಲಿ ಸ್ವಾತಂತ್ರ್ಯ ಚಳವಳಿಯ ಕಥನವನ್ನು ತಲೆಮಾರಿನಿಂದ ತಲೆಮಾರಿಗೆ ದಾಟಿಸುವಂತಿವೆ. ಎಪ್ಪತ್ತೆಂಟನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ, ಕರ್ನಾಟಕದಲ್ಲಿನ ಕೆಲವು 'ಸ್ವಾತಂತ್ರ್ಯ ಸ್ಮಾರಕ'ಗಳ ಸಚಿತ್ರ–ಕಥನ.



ಅಮರ ಸುಳ್ಯ ಕ್ರಾಂತಿಯ ಸ್ಮರಣೆಗಾಗಿ ಮಂಗಳೂರಿನ ಬಾವುಟಗುಡ್ಡೆಯಲ್ಲಿ ಸ್ಥಾಪಿಸಲಾದ ಕೆದಂಬಾಡಿ ರಾಮಯ್ಯ ಗೌಡ ಪ್ರತಿಮೆ

## ಅಮರ ಸುಳ್ಯ ಕ್ರಾಂತಿ

### ರೈತಸೇನೆಯ ಯಶಸ್ವಿ ಹೋರಾಟದ ರಕ್ತಸಿಕ್ತ ನೆನಪು

**ಕರಾವಳಿಯಲ್ಲಿ ನಡೆದ 'ಅಮರ ಸುಳ್ಯ ಕ್ರಾಂತಿ' ಸಿಪಾಯಿ ದಂಗೆಗೆ ಮೊದಲೇ ಬ್ರಿಟಿಷರ ವಿರುದ್ಧ ನಡೆದ ಬಹು ಮುಖ್ಯವಾದ ಹೋರಾಟಗಳಲ್ಲೊಂದು. ರೈತಸೇನೆಯ ಆ ಹೋರಾಟ ಬ್ರಿಟಿಷರಿಗೆ ಸೋಲಿನ ರುಚಿಯುಣ್ಣಿಸಿ, ಆತಂಕವನ್ನು ಉಂಟುಮಾಡಿತ್ತು.**

■ ಸ್ವಯಂಪ್ರಭಾ

1857ರಲ್ಲಿ ಸಿಪಾಯಿ ದಂಗೆಯೊಂದಿಗೆ ಸ್ವಾತಂತ್ರ್ಯ ಸಮರ ಆರಂಭವಾಯಿತು ಎಂಬುದೊಂದು ಔಪಚಾರಿಕ ಗ್ರಹಿಕೆ. ಅದಕ್ಕೂ ಮುನ್ನ ದೇಶದ ಮೂಲೆ ಮೂಲೆಗಳಲ್ಲಿ ಬ್ರಿಟಿಷರ ವಿರುದ್ಧ ಜನರು ಸಿಡಿದೆದ್ದ ಅದೆಷ್ಟೋ ಘಟನೆಗಳು ನಡೆದಿವೆ. ಅವುಗಳನ್ನು ದೊಂಬಿಯೆಂದೋ, ದಾಂಧಲೆ, ಕಳ್ಳಕಾಕರ ಕಾಟವೆಂದೋ ಬಿಂಬಿಸಿ ಬ್ರಿಟಿಷರು ಜನರ ಹೋರಾಟದ ಕಿಚ್ಚನ್ನು ಹತ್ತಿಕ್ಕಿದ್ದರು. ಆದರೆ ಬ್ರಿಟಿಷರನ್ನು ತಮ್ಮ ಊರಿನಿಂದ ಓಡಿಸಿ, ತಮ್ಮದೇ ರಾಜ್ಯ ಸ್ಥಾಪಿಸಿ ಧ್ವಜಾರೋಹಣ ನಡೆಸಿದ ಘಟನೆ ಕರಾವಳಿಗರ ನೆನಪಿನಲ್ಲಿದೆ. ಆ ನೆನಪಿನ ಸ್ಮಾರಕಗಳು ಇಂದಿಗೂ ತಲೆಯೆತ್ತಿ ನಿಂತಿವೆ. ಅಂತಹ ಒಂದು ಕಥೆ ಕರಾವಳಿಯ ಅಮರ ಸುಳ್ಯ ಕ್ರಾಂತಿ.

ಸುಳ್ಯದ ಬೆಳ್ಳಾರೆಯಲ್ಲಿರುವ ಬ್ರಿಟಿಷ್ ಖಜಾನೆಯ ಬಳಿಯಲ್ಲಿ ಆರಂಭವಾದ ಈ ಹೋರಾಟವು, ಮಂಗಳೂರು ನಗರದವರೆಗೆ ವಿಸ್ತರಿಸಿ, ಮಂಗಳೂರಿನ 'ಬಾವುಟ ಗುಡ್ಡೆ'ಯಲ್ಲಿ ಧ್ವಜಾರೋಹಣ ಮಾಡುವವರೆಗೆ ಯಶಸ್ಸು ಕಂಡಿತು. ಬ್ರಿಟಿಷರು ಕಾಲ್ಕಿತ್ತು ಓಡಬೇಕಾಯಿತು. ಈ ಹೋರಾಟಕ್ಕೆ ಸಾಕ್ಷಿಯೆಂಬಂತೆ ಬೆಳ್ಳಾರೆಯಲ್ಲಿ ಬ್ರಿಟಿಷರ ಖಜಾನೆಯ ಕಟ್ಟಡ ಇಂದಿಗೂ ತಲೆಯೆತ್ತಿ ನಿಂತಿದೆ. ಇತ್ತ ಧ್ವಜಾರೋಹಣ ನಡೆದ ಬಾವುಟ ಗುಡ್ಡೆಯೂ ಇತಿಹಾಸದ ಕಥೆಯನ್ನು ಸಾರುತ್ತಿದೆ. ಈ ಹೋರಾಟವನ್ನು ಮಟ್ಟಹಾಕಲು ಬ್ರಿಟಿಷರು ಸೈನ್ಯವನ್ನೇ ಕರಾವಳಿಗೆ ತಂದು, ಹೋರಾಟದಲ್ಲಿ ಭಾಗವಹಿಸಿದವರಿಗೆ ಚಿತ್ರಹಿಂಸೆ ನೀಡಿ ಗಲ್ಲಿಗೇರಿಸಿದ ಊರು ಮಂಗಳೂರಿನ ಬಿಕರ್ನಕಟ್ಟೆ. 'ಭೀಕರ ರಣಕಟ್ಟೆ' ಎಂಬ ಹೆಸರೇ ಅಪಭ್ರಂಶವಾಗಿ ಇಂದು ಬಿಕರ್ನಕಟ್ಟೆ ಎಂಬ ಹೆಸರಾಗಿ ಉಳಿದಿದೆ.

ಅಮರ ಸುಳ್ಯ ಕ್ರಾಂತಿ ನಡೆದದ್ದು 1837ರಲ್ಲಿ. 1799ರಲ್ಲಿ ಟಿಪ್ಪುಸುಲ್ತಾನ್ ಮಡಿದ ನಂತರ